**O. S. No:499/2022**
**PW:1**

(ಇಂದು ದಿನಾಂಕಃ **10-11-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದಃ**

ನಮ್ಮ ಒಟ್ಟು ಮನೆತನದ ಆದಾಯ ತೋರಿಸಲು ಯಾವುದೇ ಆದಾಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಮ್ಮ ಮನೆತನದ ಆದಾಯದ ಕುರಿತು ವಾದ ಪತ್ರದಲ್ಲಿ ಬರೆಸಿರುತ್ತೇನೆ. ದಾವಾ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ತಂದೆಗೆ ನನ್ನ ಅಜ್ಜನಿಂದ ಆಸ್ತಿಗಳು ಬಂದಿದ್ದು, ಆ ಕುರಿತು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ನನ್ನ ಅಜ್ಜನ ಹೆಸರು ಮುದಕಪ್ಪ. ಸದರಿಯವರಿಗೆ ಒಟ್ಟು 4 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಸದರಿಯವರೆಂದರೆ ಮಲ್ಲೇಶಪ್ಪ, ಹನಮಂತಪ್ಪ, ಯಲ್ಲಪ್ಪ ಹಾಗೂ ಹುಲಗಪ್ಪ. ನನ್ನ ತಂದೆ ಹಾಗೂ ಸದರಿಯವನ ಸಹೋದರ-ಸಹೋದರಿಯರ ನಡುವೆ ಪಾಲು ವಿಭಾಗವಾಗಿದೆ. ಸದರಿ ಅಂಶವನ್ನು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ. ನನ್ನ ತಂದೆಗೆ ಮೂಲತಃ ಯಾವ ಆಸ್ತಿಗಳು ಬಂದಿದ್ದವು ಎಂದು ನನ್ನ ವಾದಪತ್ರದಲ್ಲಿ ಬರೆಸಿರುವುದಿಲ್ಲ.

2. ನಮ್ಮ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಃ 176 ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಜಮೀನು 4 ರಿಂದ 6 ನೇ ಪ್ರತಿವಾದಿಯರ ಹೆಸರು ಖರೀದಿಯಾಗಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಾಗದ ಹಾಗೇ ಧಮ್ಕಿ ಹಾಕಿ ಖರೀದಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ. ದಾವಾ ಆಸ್ತಿ ಸರ್ವೇ ನಂಃ176/2 ಹಾಗೂ 237/2 ಎ ಗಳನ್ನು 4 ರಿಂದ 6 ನೇ ಪ್ರತಿವಾದಿಯರು ದಿನಾಂಕಃ 18-02-1985 ರಂದು ಖರೀದಿಸಿರುತ್ತಾರೆ ಎಂದರೆ ಸರಿ.

3. ದಾವಾ ಆಸ್ತಿ ಸರ್ವೇ ನಂಃ195/1 ಇದರ ಮೂಲ ಸರ್ವೇ ನಂಃ195 ಒಟ್ಟು ಕ್ಷೇತ್ರ 21 ಎಕರೆ 15 ಗುಂಟೆ ಜಮೀನು ಒಬ್ಬ ಗಿರಿಯಪ್ಪ ಫಕ್ಕೀರಪ್ಪ ಮಾನಶೆಟ್ಟಿಯವರಿಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನಿನ ಪೈಕಿ 4 ನೇ ಪ್ರತಿವಾದಿ ಉತ್ತರ ಭಾಗದ 5 ಎಕರೆ 27 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ನಂತರ ಸದರಿ ಜಮೀನು 195/1 ಎಂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆ ಇದ್ದಾಗ ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ. 4 ನೇ

ಪ್ರತಿವಾದಿ ಕುರಿಕಾಯುವ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿಯವನಿಗೆ 1500-2000 ಕುರಿಗಳು ಇದ್ದವು ಎಂದರೆ ಸರಿ. ಸದರಿಯವನು ಸದರಿ ಕುರಿಗಳನ್ನು ಮಾರಾಟ ಮಾಡಿ ಜಮೀನನ್ನು ಖರೀದಿಸಿರುತ್ತಾನೆ ಎಂದರೆ ಸರಿ.

4. ದಾವಾ ಆಸ್ತಿ ಸರ್ವೇ ನಂಃ 471/1 ಇದರ ಮೂಲ ಸರ್ವೇ ನಂಃ471 ಒಟ್ಟು ಕ್ಷೇತ್ರ 18 ಎಕರೆ 36 ಗುಂಟೆ ಜಮೀನು ಒಬ್ಬ ರಮೇಶ ಗೋಪಾಲಪ್ಪ ಕುಲಕರ್ಣಿ ರವರಿಗೆ ಸೇರಿದ್ದು ಎಂದರೆ ಸರಿ. ನಂತರ 4 ನೇ ಪ್ರತಿವಾದಿ 1500 ಕುರಿಗಳನ್ನು ಮಾರಾಟ ಮಾಡಿ ಸದರಿ ಜಮೀನಿನ ಪೈಕಿ ಉತ್ತರ ಭಾಗದ 5 ಎಕರೆ ಜಮೀನನ್ನು ಖರೀದಿಸಿರುತ್ತಾನೆ ಎಂದರೆ ಸರಿ. ನಂತರ ಸದರಿ ಜಮೀನು 471/1 ಎಂದು ಆಗಿರುತ್ತದೆ ಎಂದರೆ ಸರಿ.

5. ದಿನಾಂಕಃ 30-09-2021 ರಂದು 4 ರಿಂದ 6 ನೇ ಪ್ರತಿವಾದಿಯರು ತಮ್ಮಗಳ ನಡುವೆ ನೋಂದಾಯಿತ ಪಾಲು ವಿಭಾಗ ಪತ್ರದ ಪ್ರಕಾರ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಆಸ್ತಿ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಪಾಲು ವಿಭಾಗದಲ್ಲಿ 4 ನೇ ಪ್ರತಿವಾದಿಗೆ ಜಮೀನು ಸರ್ವೇ ನಂಃ 471/1 ಹಾಗೂ 195/1, 5 ನೇ ಪ್ರತಿವಾದಿಗೆ 471/1 ರಲ್ಲಿ 2 ಎಕರೆ 20 ಗುಂಟೆ ಹಾಗೂ 6 ನೇ ಪ್ರತಿವಾದಿಗೆ 176/2 ಹಾಗೂ 237/2 ಎ ರಲ್ಲಿ 2 ಎಕರೆ 14 ಗುಂಟೆ ಜಮೀನುಗಳು ಬಂದಿರುತ್ತವೆ ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ಅವರವರ ಹೆಸರುಗಳು ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸಕರಾರು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**